# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-1225/2014/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 25/4/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಸಿ.ನಾರಾಯಣಸ್ವಾಮಿ, ಹಿಂದಿನ ಕಾರ್ಯದರ್ಶಿ, ಅಗಲಗುರ್ಕಿ ಗ್ರಾಮಪಂಚಾಯಿತಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ರಾಘವೇಂದ್ರ ಎ.ವಿ.ಕೆ ಬಿನ್ ವಿ.ಕೃಷ್ಣಪ್ಪ, ಅಗಲಗುರ್ಕಿ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ ಶ್ರೀ.ಸಿ.ನಾರಾಯಣಸ್ವಾಮಿ, ಹಿಂದಿನ ಕಾರ್ಯದರ್ಶಿ, ಅಗಲಗುರ್ಕಿ ಗ್ರಾಮಪಂಚಾಯಿತಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಅಗಲಗುರ್ಕಿ ಗ್ರಾಮ ಪಂಚಾಯತ್ ವ್ಯಾಪ್ತಿ ಚೊಕ್ಕಹಳ್ಳಿ ಗ್ರಾಮದಲ್ಲಿ ಸರ್ಕಾರಿ ಉಚಿತ ನಿವೇಶನವನ್ನು ಅಕ್ರಮವಾಗಿ ಆರ್ಥಿಕವಾಗಿ ಸದೃಢವಾಗಿರುವವರಿಗೆ, ಮಾಜಿ ಸದಸ್ಯರುಗಳಿಗೆ ಹಂಚಿಕೆ ಮಾಡಿರುತ್ತಾರೆ. ಕಳೆದ 30-40 ವರ್ಷಗಳಿಂದ ಬಾಡಿಗೆ ಮನೆಗಳಲ್ಲಿ ವಾಸವಾಗಿರುವ ನಿವೇಶನ ರಹಿತರಿಗೆ ಯಾವುದೆ ನಿವೇಶನವನ್ನು ನೀಡಿಲ್ಲ, ಆದ್ದರಿಂದ ಅಕ್ರಮವಾಗಿ ನಿವೇಶವನ್ನು ಹಿಂಪಡೆದು, ನಿವೇಶನ ರಹಿತರಿಗೆ ನೀಡಬೇಕೆಂದು ಕೇಳಿಕೊಂಡಿರುತ್ತಾರೆ.

3) ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ, ಪೊಲೀಸ್ ಅಧೀಕ್ಷಕರು, ಲೋಕಾಯುಕ್ತ ಚಿಕ್ಕಬಳ್ಳಾಪುರ ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು, ಚಿಕ್ಕಬಳ್ಳಾಪುರ ಇವರು ಪೊಲೀಸ್ ಉಪಾಧೀಕ್ಷಕರ ಮೂಲಕ ತನಿಖೆ ನಡೆಸಿ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಅರ್ಜಿದಾರರು ಆರೋಪಿಸಿರುವ 9 ನಿವೇಶನಗಳ ಪೈಕಿ 6 ನಿವೇಶನಗಳನ್ನು 1991 ಮತ್ತು 2004 ನೇ ಸಾಲಿನಲ್ಲಿ ಕ್ರಮವಾಗಿ ಚಿಕ್ಕಬಳ್ಳಾಪುರ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಮತ್ತು ತಾಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಹಕ್ಕು ಪತ್ರಗಳನ್ನು ನೀಡುವ ಮೂಲಕ ಅಗಲಗುರ್ಕಿ ಗ್ರಾಮದ ಫಲಾನುಭವಿಗಳಿಗೆ ನಿವೇಶನಗಳನ್ನು ವಿತರಣೆ ಮಾಡಿರುವುದರಿಂದ ಹಾಗೂ 2007 ನೇ ಸಾಲಿನಲ್ಲಿ 3 ನಿವೇಶನಗಳನ್ನು ಗ್ರಾಮ ಪಂಚಾಯತಿಯ ನಡವಳಿಯಂತೆ ಚೊಕ್ಕಹಳ್ಳಿ ಗ್ರಾಮದ ಫಲಾನುಭವಿಗಳಿಗೆ ಶ್ರೀ ನಾರಾಯಣಸ್ವಾಮಿಯವರು ಕಿಮ್ಮತ್ತು ಕಟ್ಟಿಸಿಕೊಂಡು ಖಾತೆ ಮಾಡಿ ಹೌಸ್ ಲಿಸ್ಟ್‌ನ್ನು

ಮಾಡಿಕೊಟ್ಟಿರುತ್ತಾರೆ. ಆದ್ದರಿಂದ, ಅರ್ಜಿದಾರರು ಆರೋಪಿಸಿರುವಂತೆ ಸಿ. ನಾರಾಯಣ ಸ್ವಾಮಿ, ಅಗಲಗುರ್ಕಿ ಗ್ರಾಮ ಪಂಚಾಯತಿಯ ಕಾಯದರ್ಶಿ ಚಿಕ್ಕಬಳ್ಳಾಪುರ ತಾಲೂಕ್ ರವರ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದಿಲ್ಲವೆಂದು ವರದಿಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ, ನಿವೇಶನ ಮಂಜೂರಾತಿಗೆ ಸಂಬಂಧಪಟ್ಟಂತೆ ದಾಖಲಾತಿಗಳೊಂದಿಗೆ ಹಾಜರಾಗುವಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅಗಲಗುರ್ಕಿ ಗ್ರಾಮಪಂಚಾಯಿತಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಕ್ಕಬಳ್ಳಾಪುರ ಇವರಿಗೆ ಆದೇಶಿಸಲಾಗಿತ್ತು.

4) ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅಗಲಗುರ್ಕಿ ಗ್ರಾಮಪಂಚಾಯಿತಿ ಇವರು ಗೌರವಾನ್ವಿತರ ಮುಂದೆ ಹಾಜರಾಗಿ ವರದಿಯನ್ನು ನೀಡಿದ್ದು, ತಮ್ಮ ವರದಿಯಲ್ಲಿ ದೂರಿಗೆ ಸಂಬಂಧಪಟ್ಟಂತೆ ಗ್ರಾಮಪಂಚಾಯಿತಿಯಲ್ಲಿ ಇದಕ್ಕೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಲಾಗಿ ದಿ.10/3/1991 ರಂತೆ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ಚಿಕ್ಕಬಳ್ಳಾಪುರ ಮಂಜೂರಾತಿ ಸಂ.1 ರಿಂದ 11 ರವರೆಗೆ ಒಟ್ಟು 11 ನಿವೇಶನಗಳನ್ನು ಹಕ್ಕು ಪತ್ರಗಳ ಮೂಲಕ ಹಂಚಿಕೆ ಮಾಡಿರುತ್ತಾರೆ. ಈ ಹಕ್ಕು ಪತ್ರಗಳನ್ನು ನಿವೇಶನ ರಹಿತರಿಗೆ ಆದ್ಯತೆ ಮೇರೆಗೆ ಹಾಗೂ ಜಾತಿವಾರು ಆಯ್ಕೆ ಮಾಡಿ ಹಂಚಲಾಗಿರುತ್ತದೆ. 2007 ರಲ್ಲಿ ದಿ.1/2/2007 ರ ಗ್ರಾಮ ಪಂಚಾಯಿತಿ ಸಭೆ ತೀರ್ಮಾನದ ಮೇರೆಗೆಮತ್ತು ದಿ.9/3/2007 ರಂದು ತಾಲ್ಲೂಕು ಪಂಚಾಯಿತಿ, ಚಿಕ್ಕಬಳ್ಳಾಪುರ ಕಾರ್ಯನಿರ್ವಹಣಾಧಿಕಾರಿಗಳು ಅನುಮೋದನೆ ಮೇರೆಗೆ ಸರ್ಕಾರಿ ಶಾಲೆ, ಅಂಗನವಾಡಿ ಶಾಲೆ, ನೀರಿನ ಟ್ಯಾಂಕ್ ಪಂಚಾಯಿತಿ ಜಾಗ ಉಳಿದ ನಿವೇಶನಗಳನ್ನು ಚೊಕ್ಕಹಳ್ಳಿ ಗ್ರಾಮದ ನಿವೇಶನ ರಹಿತ ಫಲಾನುಭವಿಗಳಿಗೆ ಚದರಡಿ ಒಂದಕ್ಕೆ ರೂ.3 ರಂತೆ ಕಿಮ್ಮತ್ತಿನ ಮೇರೆಗೆ 67 ನಿವೇಶನಗಳನ್ನು ಮಂಜೂರು ಮಾಡಿರುತ್ತದೆ. ಈ ಸದರಿ ಫಲಾನುಭವಿಗಳನ್ನು ಗ್ರಾಮದಲ್ಲಿ ಸಮೀಕ್ಷೆ ನಡೆಸಿ ನಿವೇಶನ ಗ್ರಾಮದಲ್ಲಿರುವ ಎಲ್ಲಾ ಜಾತಿಯ ನಿವೇಶನ ರಹಿತರನ್ನು ಗುರುತಿಸಿ ಗ್ರಾಮಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಮಂಡಿಸಿ, ಸದರಿ ನಿರ್ಣಯಕ್ಕೆ ತಾಲ್ಲೂಕು ಪಂಚಾಯಿತಿಯಲ್ಲಿ ಅನುಮೋದನೆ ಪಡೆದು, ಫಲಾನುಭವಿಗಳಿಂದ ಚದರಕ್ಕೆ ರೂ.3 ರಂತೆ ಕಿಮ್ಮತ್ತು ಪಾವತಿಸಿಕೊಂಡು ನಿವೇಶನವನ್ನು ಹಂಚಲಾಗಿರುತ್ತದೆಯೆಂದು ತಮ್ಮ ವರದಿಯಲ್ಲಿ ಹೇಳಿರುತ್ತಾರೆ. ಅವರು ಮುಂದುವರೆದ ವರದಿಯನ್ನು ಸಲ್ಲಿಸಿದ್ದು, 2007ನೇ ಸಾಲಿನಲ್ಲಿ ಒಟ್ಟು 67 ಮನೆ ನಿವೇಶನಗಳನ್ನು ಅಗಲಗುರ್ಕಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೊಕ್ಕಳ್ಳಿ ಗ್ರಾಮದಲ್ಲಿ ಫಲಾನುಭವಿಗಳಿಗೆ ವಿತರಿಸಲಾಗಿದೆ. ಸದರಿ ನಿವೇಶನಗಳನ್ನು ವಿತರಿಸಲು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಇವರು ಅನುಮೋದನೆಯನ್ನು ದಿ.9/3/2007 ರಂದು ನೀಡಿರುತ್ತಾರೆ. ಸದರಿ 67 ಫಲನುಭವಿಗಳಿಗೆ ಯಾರಿಗೂ ಹಕ್ಕುಪತ್ರಗಳನ್ನು ವಿತರಿಸಲಾಗಿರುವುದಿಲ್ಲ. ಆದರೆ 2007 ರಲ್ಲಿ ನೇರವಾಗಿ ಫಲಾನುಭವಿಗಳ ಹೆಸರಿಗೆ ಖಾತೆಯನ್ನು ಅಗಲಗುರ್ಕಿ ಗ್ರಾಮ ಪಂಚಾಯಿತಿಯವರು ನೀಡಿರುತ್ತಾರೆಂದು ಹೇಳಿರುತ್ತಾರೆ. ಆದ್ದರಿಂದ, ಎದುರುದಾರರಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಆದೇಶಿಸಲಾಗಿತ್ತು.

5) ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು ಅಗಲಗುರ್ಕಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಬರುವ ಚೊಕ್ಕಹಳ್ಳಿ ಗ್ರಾಮದಲ್ಲಿ ನಿವೇಶನಗಳ ವಿತರಣೆಯಲ್ಲಿ ಯಾವುದೇ ರೀತಿ ಅಕ್ರಮ ನಡೆದಿರುವುದಿಲ್ಲ. ಗ್ರಾಮಪಂಚಾಯಿತಿಯಲ್ಲಿ ಯಾವುದೇ

ಕೆಲಸ ನಿರ್ವಹಿಸಬೇಕಾದರೂ ಕಾನೂನು ರೀತ್ಯ ಪಂಚಾಯಿತಿ ಸಭೆಯಲ್ಲಿ ಮಂಡಿಸಿ ಕ್ರಮ ತೆಗೆದುಕೊಂಡಿರುತ್ತಾರೆ. ಬಿ.ಎನ್.ವಿಜಯಕುಮಾರ್, ಚೊಕ್ಕಹಳ್ಳಿ, ಸಿ.ಎನ್.ಭಾರತಿ, ಚೊಕ್ಕಹಳ್ಳಿ, ಆರ್.ಸುದರ್ಶನಮೂರ್ತಿ, ಚೊಕ್ಕಹಳ್ಳಿ, ನರಸಪ್ಪ, ಚೊಕ್ಕಹಳ್ಳಿ, ಎ.ಎಸ್.ಭಾಗ್ಯ, ಚೊಕ್ಕಹಳ್ಳಿ, ಇವರಿಗೆ ತಾಲ್ಲೂಕು ಪಂಚಾಯಿತಿ, ಚಿಕ್ಕಬಳ್ಳಾಪುರ ಇವರು ಹಕ್ಕುಪತ್ರ ನೀಡಿರುತ್ತಾರೆ. ಅದರಂತೆ ಅವರ ಹೆಸರಿಗೆ ಖಾತೆಯಾಗಿರುತ್ತದೆಯೆಂದು ಹೇಳಿರುತ್ತಾರೆ.

6) ಹಾಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರ ವರದಿಯನ್ನು ಪರಿಶೀಲಿಸಿದಾಗ, 2007ನೇ ಸಾಲಿನಲ್ಲಿ ವಿತರಿಸಲಾದ 67 ಮನೆ ನಿವೇಶನಗಳ ಬಗ್ಗೆ ಯಾರಿಗೂ ಹಕ್ಕುಪತ್ರಗಳನ್ನು ವಿತರಿಸಲಾಗಿರುವುದಿಲ್ಲ. ಆದರೆ, 2007 ರಲ್ಲಿ ನೇರವಾಗಿ ಫಲಾನುಭವಿಗಳ ಹೆಸರಿಗೆ ಖಾತೆಯನ್ನು ಅಗಲಗುರ್ಕಿ ಗ್ರಾಮಪಂಚಾಯಿತಿಯವರು ನೀಡಿರುತ್ತಾರೆಂದು ಹೇಳಿರುವುದು ಕಂಡುಬರುತ್ತದೆ. ಫಲಾನುಭವಿಗಳಿಗೆ ಹಕ್ಕುಪತ್ರವನ್ನು ನೀಡದೆ ಯಾವ ಆಧಾರದಲ್ಲಿ ಖಾತೆಯನ್ನು ನೀಡಲಾಗಿದೆ ಎನ್ನುವ ಅಂಶವನ್ನು ಎದುರುದಾರರು ವಿವರಿಸಬೇಕಾಗಿತ್ತು. ಆದರೆ, ಸದರಿ ವಿಚಾರದ ಬಗ್ಗೆ ಎದುರುದಾರರು ಯಾವುದೇ ಸಮಜಾಯಿಷಿಯನ್ನು ನೀಡಿರುವುದಿಲ್ಲ. ಮೇಲಿನ ಅಂಶಗಳನ್ನು ಗಮನಿಸಿದಾಗ, ಎದುರುದಾರರು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

7) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ ಫಲಾನುಭವಿಗಳ ಅರ್ಹತೆಯ ಬಗ್ಗೆ ವಿಚಾರಣೆ ನಡೆಸಿ, ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಿಸಿ ಅವರಿಗೆ ಖಾತೆ ಮಾಡಿಕೊಡುವ ಬಗ್ಗೆ ಪ್ರಾಧಿಕಾರದವರು ತೀರ್ಮಾನ ಕೈಗೊಳ್ಳಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 25/4/12

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**